ಕರ್ನಾಟಕ ಸರ್ಕಾರ

**ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ**

ಸಂ: ಎಲ್‌ಜಿಎಲ್-2/ಇತರೆ/ಸಿಆರ್-03/2018-19

ನಿರ್ದೇಶಕರ ಕಾರ್ಯಾಲಯ
ಕಾರ್ಮಿಕ ಭವನ, 2ನೇ ಮಹಡಿ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-29, ದಿನಾಂಕ: 05-05-2018

**ಸುತ್ತೋಲೆ**

**ವಿಷಯ** 2018ರ ಕರ್ನಾಟಕ ವಿಧಾನಸಭಾ ಚುನಾವಣೆ ನಡೆಯುವ ಸಾರ್ವತ್ರಿಕ ಚುನಾವಣೆ 2018- ಮತದಾನದ ದಿನಾಂಕದಂದು ನೊಂದಾಯಿತ ಕಾರ್ಖಾನೆಗಳಿಗೆ ರಜಾ ಘೋಷಿಸುವ ಕುರಿತು.

**ಉಲ್ಲೇಖ:**
1. ಸಹಾಯಕ ಮುಖ್ಯ ಚುನಾವಣಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ ರವರ ಪತ್ರ ಸಂ:ಸಿಆಸುಇ 01 ಚುರಾಘೋ 2018 ದಿ: 20-04-2018.
2. ಸರ್ಕಾರದ ಪತ್ರ ಸಂ: ಕಾಇ 2581 ಸ್ಥೀಮರ 2018 (ಪತ್ರ) ದಿ:26-04-2018.

ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ, ಕರ್ನಾಟಕ ವಿಧಾನಸಭಾ 2018ರ ಸಾರ್ವತ್ರಿಕ ಚುನಾವಣೆ ಘೋಷಣೆಯಾಗಿರುತ್ತದೆ. ಮತದಾನವು ದಿ: 12-05-2018 (ಶನಿವಾರ) ರಂದು ನಡೆಯಲಿದೆ. ಮತದಾನದ ದಿನಾಂಕದಂದು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನೊಂದಾಯಿತ ಕಾರ್ಖಾನೆ / ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ನೌಕರ ಮತದಾರರಿಗೆ ಮತ ಚಲಾಯಿಸಲು ಅವಕಾಶ ಮಾಡಿಕೊಡಬೇಕಾಗಿದೆ. ಈ ಸಂಬಂಧ **ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951ರ ಕಲಂ 135 (ಬಿ)** ರಂತೆ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಹ ಮತದಾರನು / ಳು ಮತ ಚಲಾಯಿಸಲು ವೇತನ ಸಹಿತ ರಜೆ ಮಂಜೂರು ಮಾಡಬೇಕೆಂದು 1996ರಲ್ಲಿ ತಿದ್ದುಪಡಿ ತಂದಿರುತ್ತದೆ. ಆದಪ್ರಯುಕ್ತ ನಿಯಮದ ಪ್ರಕಾರ ಪ್ರತಿ ಅರ್ಹ ಮತದಾರನಿಗೆ / ಳಿಗೆ ಆಯಾಯ ದಿನಾಂಕದಂದು ವೇತನ ಸಹಿತ ರಜೆ ಮಂಜೂರು ಮಾಡುವುದು ಆಡಳಿತವರ್ಗದವರ ಕರ್ತವ್ಯವಾಗಿದೆ. ಈ ವಿಷಯವನ್ನು ಎಲ್ಲಾ ಕಾರ್ಖಾನೆಗಳ ಆಡಳಿತವರ್ಗದವರ ಗಮನಕ್ಕೆ ತರುತ್ತಾ ಅಂದು ತಪ್ಪದೇ ವೇತನ ಸಹಿತ ರಜೆ ಘೋಷಿಸಿ, ಎಲ್ಲಾ ಅರ್ಹ ಕಾರ್ಮಿಕರು ಸಹ ಮತದಾನ ಮಾಡಿ ಅವರ ಮೂಲಭೂತ ಹಕ್ಕು ಚಲಾಯಿಸಲು ಅನುವು ಮಾಡಿಕೊಡುವುದು.

ಯಾವುದೇ ಕಾರ್ಖಾನೆಯು ನಿರಂತರ ಉತ್ಪಾದನೆಯಲ್ಲಿ ತೊಡಗುವುದು ಅನಿವಾರ್ಯವೆಂದು ಕಂಡುಬಂದ ಪಕ್ಷದಲ್ಲಿ ಪರ್ಯಾಯ ವ್ಯವಸ್ಥೆ ರೂಪಿಸಿಕೊಂಡು ಅಂತಹ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಕಾಶ ಮಾಡಿಕೊಡಲು ಸೂಚಿಸಿದೆ.

ಈ ವಿಷಯದಲ್ಲಿ ಯಾವುದೇ ಕಾರ್ಮಿಕರಿಗೆ ಮತದಾನ ಮಾಡಲು ರಜೆ ಅಥವಾ ಅನುಕೂಲ ಮಾಡಿಕೊಡದಿದ್ದಲ್ಲಿ ಅಂತಹ ಕಾರ್ಖಾನೆ ವಿರುದ್ಧ **ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951ರ ಕಲಂ 135 (ಬಿ)** ರ ಉಲ್ಲಂಘನೆ ಅನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದು.

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು

ಇವರಿಗೆ:
ಅನುಭವದಾರರು/ವ್ಯವಸ್ಥಾಪಕರು,
ಎಲ್ಲಾ ನೊಂದಾಯಿತ ಕಾರ್ಖಾನೆಗಳು